**CCE RF**
**CCE RR**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2018**

**S.S.L.C. EXAMINATION, MARCH / APRIL, 2018**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 02. 04. 2018 ] **ಸಂಕೇತ ಸಂಖ್ಯೆ : 83-K (Phy.)**

Date : 02. 04. 2018 ] **CODE NO. : 83-K (Phy.)**

# ವಿಷಯ : ವಿಜ್ಞಾನ

# Subject : SCIENCE

**(ಭೌತಶಾಸ್ತ್ರ / Physics)**

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)**

**[ ಗರಿಷ್ಠ ಅಂಕಗಳು : 80**

**[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 1. | 'ಕಲ್ಲಿದ್ದಲು ಒಂದು ನವೀಕರಿಸಲಾಗದ ಶಕ್ತಿಯ ಆಕರ.' ಏಕೆಂದರೆ,<br>***ಉತ್ತರ :*** (C) — ಕಲ್ಲಿದ್ದಲಿನ ಸಂಗ್ರಹ ವೇಗವಾಗಿ ಕಡಿಮೆಯಾಗುತ್ತಿದೆ ಮತ್ತು ಅದನ್ನು ಮರುಪೂರೈಕೆ ಮಾಡುವುದು ಕಷ್ಟ | 1 |
| 4. | ಒಬ್ಬ ವ್ಯಕ್ತಿಯು ಶಬ್ದವು ಪ್ರತಿಫಲಿಸುವ ಮೇಲ್ಮೈನಿಂದ 850 m ದೂರದಲ್ಲಿ ನಿಂತು ಜೋರಾಗಿ ಚಪ್ಪಾಳೆ ತಟ್ಟುತ್ತಾನೆ. ಶಬ್ದದ ವೇಗ ಗಾಳಿಯಲ್ಲಿ 340 $ms^{-1}$ ಆದರೆ, ಪ್ರತಿಧ್ವನಿಯು ಅವನನ್ನು ತಲುಪಲು ತೆಗೆದುಕೊಳ್ಳುವ ಕಾಲ<br>***ಉತ್ತರ :*** (A) — 5 s | 1 |
| 6. | ಹಬೆ ಇಂಜಿನ್ ಅನ್ನು ತಕ್ಷಣ ಪ್ರಾರಂಭಿಸಲು ಸಾಧ್ಯವಿಲ್ಲ. ಏಕೆಂದರೆ,<br>***ಉತ್ತರ :*** (B) — ನೀರನ್ನು ಕಾಸಿ ಹಬೆಯನ್ನು ಉಂಟುಮಾಡಬೇಕು | 1 |
| 7. | ಮೋಟಾರ್ ಕಾರ್ಯನಿರ್ವಹಿಸುವ ತತ್ವ<br>***ಉತ್ತರ :*** (D) — ಕಾಂತಕ್ಷೇತ್ರದಲ್ಲಿ ವಿದ್ಯುತ್ ಪ್ರವಹಿಸುತ್ತಿರುವ ವಾಹಕವನ್ನು ಇಟ್ಟಾಗ ಅದು ಯಾಂತ್ರಿಕ ಬಲವನ್ನು ಗಳಿಸುತ್ತದೆ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

12. ಇತ್ತೀಚಿನ ದಿನಗಳಲ್ಲಿ ಡೀಸೆಲ್‌ಗೆ ಪರ್ಯಾಯವಾಗಿ ಜೈವಿಕ ಡೀಸೆಲ್ ಅನ್ನು ಸಾರಿಗೆ ವಾಹನಗಳಲಿ ಉಪಯೋಗಿಸಲಾಗುತ್ತಿದೆ. ಈ ಕ್ರಮದಿಂದ ಆಗುವ ಎರಡು ಅನುಕೂಲಗಳನ್ನು ಬರೆಯಿರಿ.

***ಉತ್ತರ :***

★ ಪರಿಸರ ಸ್ನೇಹಿ / ಪರಿಸರ ಮಾಲಿನ್ಯವನ್ನು ಕಡಿಮೆ ಮಾಡುತ್ತದೆ


★ ನವೀಕರಿಸಬಹುದಾದ / ಅಸಾಂಪ್ರದಾಯಿಕ ಶಕ್ತಿಯ ಆಕರ

★ ವಾತಾವರಣದಲ್ಲಿ ಕಾರ್ಬನ್ ಡೈ ಆಕ್ಸೈಡ್ ಪ್ರಮಾಣವನ್ನು ಕಡಿಮೆ ಮಾಡುತ್ತದೆ

(ಯಾವುದಾದರೂ ಎರಡು) ½ + ½ 1


13. *p-n-p* ಟ್ರಾನ್ಸಿಸ್ಟರ್‌ನ ಮಂಡಲ ಸಂಕೇತವನ್ನು ಬರೆಯಿರಿ.

***ಉತ್ತರ :***




1

15. ವಿದ್ಯುತ್ ಪ್ರಸರಣವನ್ನು ಸೂಚಿಸುವ ರೇಖಾನಕ್ಷೆಯನ್ನು ಈ ಕೆಳಗೆ ನೀಡಲಾಗಿದೆ.




'*A*' ಮತ್ತು '*B*' ಎಂದು ಸೂಚಿಸಿರುವ ಸ್ಥಳಗಳಲ್ಲಿ ಉಪಯೋಗಿಸಬೇಕಾದ ಸಾಧನಗಳನ್ನು ಹೆಸರಿಸಿ.

***ಉತ್ತರ :***

*A* — ಹೆಚ್ಚಿನ ವೋಲ್ಟೇಜ್ ವಿದ್ಯುತ್ಪರಿವರ್ತಕ ½

*B* — ಕಡಿಮೆ ವೋಲ್ಟೇಜ್ ವಿದ್ಯುತ್ಪರಿವರ್ತಕ ½ 1


21. ಡಾಪ್ಲರ್ ಪರಿಣಾಮ ಎಂದರೇನು ? ಡಾಪ್ಲರ್ ಪರಿಣಾಮದ ಎರಡು ಅನ್ವಯಗಳನ್ನು ತಿಳಿಸಿ.

***ಅಥವಾ***

ಶ್ರವಣಾತೀತ ತರಂಗಗಳ ಆವರ್ತಾಂಕ ಅಧಿಕವಾಗಿರುವುದರಿಂದ ಆಗುವ ಉಪಯೋಗಗಳನ್ನು ಪಟ್ಟಿ ಮಾಡಿ.


***ಉತ್ತರ :***

ತರಂಗದ ಆಕರ ಮತ್ತು ವೀಕ್ಷಕನ ನಡುವಿನ ಸಾಪೇಕ್ಷ ಚಲನೆಯಿಂದಾಗಿ, ತರಂಗದ ಆವೃತ್ತಿಯು ಬದಲಾದಂತೆ ಭಾಸವಾಗುತ್ತದೆ. ಇದೇ ಡಾಪ್ಲರ್ ಪರಿಣಾಮ. 1

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಅನ್ವಯ –<br>★ ಕೃತಕ ಉಪಗ್ರಹಗಳನ್ನು ಪತ್ತೆ ಹಚ್ಚಲು<br>★ ಜಲಾಂತರ್ಗಾಮಿಗಳನ್ನು ಪತ್ತೆಹಚ್ಚಲು, ಅದರ ವೇಗವನ್ನು ಕಂಡುಹಿಡಿಯಲು<br>★ ನಕ್ಷತ್ರಗಳ / ಗೆಲಕ್ಸಿಗಳ ಜವವನ್ನು ಅಂದಾಜು ಮಾಡಲು<br>★ ಶನಿಗ್ರಹದ ಉಂಗುರಗಳನ್ನು ಅಧ್ಯಯನ ಮಾಡಲು<br>(ಯಾವುದಾದರೂ ಎರಡು) ½ + ½ | 2 |
| | **ಅಥವಾ** | |
| | ಶ್ರವಣಾತೀತ ತರಂಗಗಳನ್ನು<br>★ ಬೆರೆಯದ ದ್ರವಗಳ ಏಕರೂಪ ಮಿಶ್ರಣದ ತಯಾರಿಕೆಯಲ್ಲಿ<br>★ ಮಿಶ್ರಲೋಹ ತಯಾರಿಕೆ, ಛಾಯಾಚಿತ್ರಗಳ ಫಿಲ್ಮ್‌ಗಳಿಗೆ ಎಮಲ್ಷನ್‌ಗಳ ತಯಾರಿಕೆಯಲ್ಲಿ<br>★ ಬಟ್ಟೆಗಳಲ್ಲಿನ ಗ್ರೀಸ್, ಕೊಳೆ ಹೋಗಲಾಡಿಸಲು<br>★ ಕೀಟ ವಿಕರ್ಷಕಗಳಾಗಿ<br>★ ಬ್ಯಾಕ್ಟೀರಿಯಾವನ್ನು ಕೊಲ್ಲಲು<br>★ ನರವೇದನೆ ಮತ್ತು ಸಂಧಿವಾತ ವೇದನೆ ಹೋಗಲಾಡಿಸಲು<br>★ ರಕ್ತರಹಿತ ಶಸ್ತ್ರಚಿಕಿತ್ಸೆಯಲ್ಲಿ<br>★ ಪಿತ್ತಕೋಶದ ಕಲ್ಲುಗಳನ್ನು ಪುಡಿಮಾಡಲು ಬಳಸುತ್ತಾರೆ<br>★ ಸೋನಾರ್ ಶ್ರವಣಾತೀತ ಕ್ರಮಲೋಕಕ (ಸ್ಕ್ಯಾನರ್)ದಲ್ಲಿ ಬಳಸುತ್ತಾರೆ<br>(ಯಾವುದಾದರೂ ನಾಲ್ಕು) 4 × ½ | 2 |
| 22. | ಎಸಿ ಡೈನಮೋದ ಚಿತ್ರವನ್ನು ಬರೆದು, ಕೆಳಗಿನ ಭಾಗಗಳನ್ನು ಗುರುತಿಸಿ.<br>(i) ಆರ್ಮೇಚರ್<br>(ii) ಕುಂಚಗಳು<br>***ಉತ್ತರ :***<br><br><br>ಚಿತ್ರಕ್ಕೆ 1<br>ಸರಿಯಾದ ಭಾಗಗಳಿಗೆ 2 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

28. ಈ ಚಿತ್ರವನ್ನು ಗಮನಿಸಿ. ಡಯೋಡ್‌ನ ಯಾವ ಗುಣವು ಇಲ್ಲಿ ಸೂಚಿತವಾಗಿದೆ ? ಆ ಗುಣವನ್ನು ವಿವರಿಸಿ.




***ಉತ್ತರ :***

★ ದಿಷ್ಟಿಕಾರಕ ಕ್ರಿಯೆ / ದಿಷ್ಟಿಕಾರಕ

★ ಡಯೋಡ್, ಮುನ್ನಡೆ ಓಲುಮೆಯಲ್ಲಿ ವಿದ್ಯುತ್‌ಪ್ರವಾಹವನ್ನು ಹರಿಯಲು ಬಿಡುತ್ತದೆ. ಆದರೆ ವ್ಯತಿರಿಕ್ತ ಓಲುಮೆಯಲ್ಲಿ ವಿದ್ಯುತ್‌ಪ್ರವಾಹವನ್ನು ಹರಿಯಲು ಬಿಡುವುದಿಲ್ಲ. 1

***ಅಥವಾ***

★ ಡಯೋಡ್ ಒಂದು ದಿಕ್ಕಿನಲ್ಲಿ ಮಾತ್ರ ವಿದ್ಯುತ್ತನ್ನು ಹರಿಯಲು ಬಿಡುತ್ತದೆ. ಡಯೋಡನ್ನು ಪರ್ಯಾಯ ವಿದ್ಯುತ್ಪ್ರವಾಹವನ್ನು ನೇರ ವಿದ್ಯುತ್ಪ್ರವಾಹವನ್ನಾಗಿ ಪರಿವರ್ತಿಸಲು ಬಳಸುತ್ತಾರೆ. 1 — **2**

34. ಒಂದು ತರಂಗದ ತರಂಗದೂರ 3 m ಆಗಿದೆ. ಅದರ ವೇಗ 330 $ms^{-1}$ ಆದರೆ, ಆ ತರಂಗದ ಆವೃತ್ತಿಯನ್ನು ಕಂಡುಹಿಡಿಯಿರಿ. ಈ ತರಂಗದ ಆವೃತ್ತಿಯ ಬೆಲೆಯು ಅರ್ಧದಷ್ಟಾದಾಗ ಅದರ ಕಾಲಾವಧಿಯನ್ನು ಲೆಕ್ಕಾಚಾರ ಮಾಡಿ.

***ಉತ್ತರ :***

$V = n\lambda$

$n = \frac{V}{\lambda}$ ½

$= \frac{330}{3}$

$n = 110$ Hz ½

$n = \frac{1}{2} \times 110$

$n = 55$ Hz ½

$T = \frac{1}{55}$ ½

ಅಥವಾ ಅಥವಾ

$T = 0{\cdot}018$ s ½ — **2**


| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

35. ನ್ಯೂಕ್ಲೀಯ ವಿದ್ಯುತ್ ಕ್ರಿಯಾಕಾರಿಯ ಚಿತ್ರವನ್ನು ಬರೆದು, ಈ ಕೆಳಗಿನ ಭಾಗಗಳನ್ನು ಗುರುತಿಸಿ.

(i) ನ್ಯೂಟ್ರಾನ್‌ಗಳನ್ನು ಗರ್ಭದೊಳಗೇ ಇರುವಂತೆ ಮಾಡುವ ಭಾಗ

(ii) ವಿಕಿರಣ ಕವಚ

***ಉತ್ತರ :***




ಚಿತ್ರಕ್ಕೆ 2

ಸರಿಯಾದ ಭಾಗಗಳಿಗೆ 2 × ½ — 3

37. ಪೆಟ್ರೋಲ್ ಇಂಜಿನ್‌ನ ಕಾರ್ಯವಿಧಾನದಲ್ಲಿ, ಭುಕ್ತಿ ಹೊಡೆತ ಮತ್ತು ಸಂಪೀಡನಾ ಹೊಡೆತವನ್ನು ವಿವರಿಸಿ.

***ಅಥವಾ***

ಡೀಸೆಲ್ ಇಂಜಿನ್‌ನ ಕಾರ್ಯವಿಧಾನವನ್ನು ವಿವರಿಸಿ.

***ಉತ್ತರ :***

*ಭುಕ್ತಿ ಹೊಡೆತ :*

★ ಆವೀಕೃತ ಪೆಟ್ರೋಲ್ ಮತ್ತು ಗಾಳಿಯ ಮಿಶ್ರಣವು ಆಗಮ ಕವಾಟದ ಮೂಲಕ ಸಿಲಿಂಡರ್‌ನೊಳಗೆ ಬರುತ್ತದೆ. ½

★ ನಿರ್ಗಮ ಕವಾಟ ಮುಚ್ಚಿರುತ್ತದೆ. ½

★ ಪಿಸ್ಟನ್ ಕಿಡಿಬೆಣೆಯ ಕಡೆಗೆ ಚಲಿಸುತ್ತದೆ. ½

*ಸಂಪೀಡನಾ ಹೊಡೆತ :*

★ ಆಗಮ ಮತ್ತು ನಿರ್ಗಮ ಕವಾಟಗಳು ಮುಚ್ಚಿರುತ್ತವೆ. ½

★ ಪಿಸ್ಟನ್ ಕಿಡಿಬೆಣೆಯ ಕಡೆಗೆ ಚಲಿಸುವುದರ ಮೂಲಕ ಪೆಟ್ರೋಲ್ ಮತ್ತು ಗಾಳಿಯ ಮಿಶ್ರಣವನ್ನು ಸಂಪೀಡಿಸುತ್ತದೆ. ½

★ ಮಿಶ್ರಣದ ತಾಪ ಹೆಚ್ಚಾಗುತ್ತದೆ. ½ — 3

***ಅಥವಾ***

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ★ ಭುಕ್ತಿ ಹೊಡೆತದಲ್ಲಿ ಶುದ್ಧಗಾಳಿಯನ್ನು ಮಾತ್ರ ಸಿಲಿಂಡರ್ ಒಳಗೆ ಕಳುಹಿಸಲಾಗುತ್ತದೆ ಮತ್ತು ಸಂಪೀಡಿಸಲಾಗುತ್ತದೆ. ½ | |
| | ★ ಸಂಪೀಡನಾ ಅನುಪಾತ 14 : 1 ರಿಂದ 25 : 1 ಇರುವುದರಿಂದ ಇಂಧನವನ್ನು ಹೊತ್ತಿಸಲು ಬೇಕಾದ ತಾಪ ಉಂಟಾಗುತ್ತದೆ. ½ | |
| | ★ ಸಂಪೀಡನಾ ಹೊಡೆತದ ಕೊನೆಯಲ್ಲಿ ಡೀಸೆಲ್‌ನ ಸೂಕ್ಷ್ಮ ತುಂತುರುಗಳನ್ನು ಸಿಲಿಂಡರ್ ಒಳಕ್ಕೆ ಕಳುಹಿಸಲಾಗುತ್ತದೆ. ½ | |
| | ★ ಡೀಸೆಲ್ ಥಟ್ಟನೆ ಜ್ವಾಲೆ ಹೊಮ್ಮಿಸುತ್ತ ಉರಿಯುತ್ತದೆ. ಇದರಿಂದ ಹೆಚ್ಚು ಒತ್ತಡದಲ್ಲಿ ಅನಿಲಗಳು ಬಿಡುಗಡೆಯಾಗುತ್ತವೆ. ½ | |
| | ★ ಈ ಅನಿಲಗಳ ವ್ಯಾಕೋಚನೆಯಿಂದ ಪಿಸ್ಟನ್ ತಳ್ಳಲ್ಪಡುತ್ತದೆ. ½ | |
| | ★ ನಿಷ್ಕಾಸ ಹೊಡೆತದಲ್ಲಿ ವ್ಯರ್ಥ ಅನಿಲಗಳು ಸಿಲಿಂಡರ್‌ನಿಂದ ಹೊರಹಾಕಲ್ಪಡುತ್ತವೆ. ½ | 3 |
| 40. | (a) ಒಂದು ನಕ್ಷತ್ರದ ಕೆಂಪು ದೈತ್ಯಾವಸ್ಥೆಯನ್ನು ವಿವರಿಸಿ. ಕೆಂಪು ದೈತ್ಯಾವಸ್ಥೆಯ ನಂತರದ ನಕ್ಷತ್ರದ ಹಂತವನ್ನು ನಿರ್ಧರಿಸುವ ಅಂಶ ಯಾವುದು ?<br>(b) ಭೂಮಿಗೆ ಸಂಬಂಧಿಸಿದಂತೆ ವಿಮೋಚನಾ ವೇಗವನ್ನು ನಿರೂಪಿಸಿ. ವಿಮೋಚನಾ ವೇಗದ ಗಣಿತೀಯ ಸೂತ್ರದಲ್ಲಿ R ಮತ್ತು g ಗಳು ಏನನ್ನು ಸೂಚಿಸುತ್ತವೆ ?<br>***ಅಥವಾ***<br>(a) ಒಂದು ನಕ್ಷತ್ರದ ಸೂಪರ್ನೋವಾ ಹಂತವನ್ನು ವಿವರಿಸಿ. ಕಪ್ಪುಕುಳಿಯ ಪ್ರಮುಖ ಲಕ್ಷಣವನ್ನು ತಿಳಿಸಿ.<br>(b) ಸಂವೇಗ ಸಂರಕ್ಷಣಾ ತತ್ವವನ್ನು ನಿರೂಪಿಸಿ. "ರಾಕೆಟ್‌ಗಳು ಕಾರ್ಯನಿರ್ವಹಿಸಲು ನೋದನಕಾರಿಗಳು ಅಗತ್ಯ." ಏಕೆ ? | |
| | ***ಉತ್ತರ :*** | |
| | a) *ಒಂದು ನಕ್ಷತ್ರದ ಕೆಂಪು ದೈತ್ಯಾವಸ್ಥೆಯಲ್ಲಿ,* | |
| | ★ ವಿಕಿರಣಗಳಿಂದಾದ ಹೊರಮುಖ ಒತ್ತಡವು ಅದರ ವಿರುದ್ಧ ದಿಕ್ಕಿನ ಗುರುತ್ವ ಒಳಮುಖ ಒತ್ತಡಕ್ಕಿಂತ ಬಹಳಷ್ಟು ಹೆಚ್ಚಾಗಿ ನಕ್ಷತ್ರದ ಹೊರಪದರಗಳು ಹೆಚ್ಚುತ್ತವೆ (ಉಬ್ಬುತ್ತವೆ). ½ | |
| | ★ ನಕ್ಷತ್ರದ ಮೇಲ್ಮೈ ವಿಸ್ತೀರ್ಣ ಹೆಚ್ಚಾಗಿ ವಿಕಿರಣ ಸೋರಿಕೆ ಹೆಚ್ಚಾಗುತ್ತದೆ. ½ | |
| | ★ ನಕ್ಷತ್ರದ ತಾಪ ಕಡಿಮೆಯಾಗಿ, ಕಡಿಮೆ ಆವರ್ತದ ವಿಕಿರಣಗಳನ್ನು ಹೊರಸೂಸುತ್ತವೆ. ನಕ್ಷತ್ರವು ಕೆಂಪು ಬಣ್ಣಕ್ಕೆ ತಿರುಗುತ್ತದೆ. ½ | |
| | → ನಕ್ಷತ್ರದ ರಾಶಿ ½ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| | b) ಒಂದು ಕಾಯವು ಭೂಮಿಯ ಗುರುತ್ವಕ್ಷೇತ್ರದಿಂದ ತಪ್ಪಿಸಿಕೊಂಡು ಹೋಗುವಂತಾಗಲು ಅದಕ್ಕೆ ನೀಡಬೇಕಾದ ಕನಿಷ್ಠ ಆರಂಭಿಕ ವೇಗ. | 1 | |
| | $R \rightarrow$ ಭೂಮಿಯ ತ್ರಿಜ್ಯ | ½ | |
| | $g \rightarrow$ ಗುರುತ್ವ ವೇಗೋತ್ಕರ್ಷ | ½ | 4 |
| | **ಅಥವಾ** | | |
| | a) ★ ಸೌರರಾಶಿಯ ಐದು ಪಟ್ಟು ಅಥವಾ ಅದಕ್ಕೂ ಹೆಚ್ಚಿನ ರಾಶಿಯುಳ್ಳ ನಕ್ಷತ್ರಗಳು ಸೂಪರ್ನೋವಾ ಹಂತವನ್ನು ತಲುಪುತ್ತವೆ. | ½ | |
| | ★ ಹಲವು ನ್ಯೂಕ್ಲೀಯ ಕ್ರಿಯೆಗಳು ಪ್ರಾರಂಭವಾಗುತ್ತವೆ. ಹೀಲಿಯಂ ನ್ಯೂಕ್ಲಿಯಸ್‌ಗಳು ಸಮ್ಮಿಲನ ಹೊಂದಿ ಕಾರ್ಬನ್ ಗರ್ಭ ಉಂಟಾಗುತ್ತದೆ. ಕಾರ್ಬನ್ ಬೀಜಗಳ ಸಮ್ಮಿಲನದಿಂದ ಆಕ್ಸಿಜನ್, ಮೆಗ್ನೀಷಿಯಂ ಹೀಗೆ ಭಾರವಾದ ಧಾತುಗಳು ಉಂಟಾಗಿ ಶಕ್ತಿ ಬಿಡುಗಡೆಯಾಗುತ್ತದೆ. | ½ | |
| | ★ ನಕ್ಷತ್ರ ಗರ್ಭದಲ್ಲಿ ಕಬ್ಬಿಣದ ನ್ಯೂಕ್ಲಿಯಸ್ ಉಂಟಾದಾಗ ನಕ್ಷತ್ರವು ಸ್ಫೋಟಗೊಳ್ಳುತ್ತವೆ. ಈ ವಿದ್ಯಮಾನವೇ ಸೂಪರ್ನೋವಾ. | ½ | |
| | ★ ಅತ್ಯಧಿಕ ಗುರುತ್ವ / ಅತ್ಯಧಿಕ ಸಾಂದ್ರತೆ | ½ | |
| | b) ಯಾವುದೇ ವ್ಯವಸ್ಥೆಯ ಮೇಲೆ ಬಾಹ್ಯಬಲ ಸೊನ್ನೆ ಆಗಿದ್ದಾಗ ಆ ವ್ಯವಸ್ಥೆಯ ಒಟ್ಟು ಸಂವೇಗ ಸಂರಕ್ಷಿತವಾಗುತ್ತದೆ. | 1 | |
| | ★ ರಾಕೆಟ್‌ಗಳ ಉಡಾವಣೆಗೆ ನೋದನಾಕಾರಿಗಳು ಅಗತ್ಯ | | |
| | ★ ರಾಕೆಟ್‌ಗಳು ವ್ಯೋಮದ ಹೊರವಲಯದಲ್ಲಿ (ನಿರ್ವಾತದಲ್ಲಿ) ಕಾರ್ಯನಿರ್ವಹಿಸಬೇಕಾಗುತ್ತದೆ. | ½ | |
| | ★ ನೋದನಕಾರಿಗಳಲ್ಲಿರುವ ಆಕ್ಸಿಡಕಗಳು, ಆಕ್ಸಿಜನ್‌ನ ಕೊರತೆಯಿದ್ದಾಗಲೂ, ಇಂಧನವನ್ನು ಹೊತ್ತಿಸಲು ಸಹಾಯಕವಾಗಿವೆ. | | |
| | ಆದ್ದರಿಂದ ರಾಕೆಟ್ ಕಾರ್ಯನಿರ್ವಹಿಸಲು ನೋದನಕಾರಿಗಳು ಅಗತ್ಯ. | ½ | 4 |
| | (ಯಾವುದಾದರೂ ಎರಡು) | | |